ಶ್ರೀ ಬಿ. ರಾಚಯ್ಯ.—ಕಾರ್ಯಕಲಾಪಗಳ ಪಟ್ಟಿ ಪ್ರಕಾರ ಕೆಲಸ ಕಾರ್ಯಗಳು ಸದನದಲ್ಲಿ ನಡೆಯಬೇಕು. ಈ ಕೆಲಸ ಆದ ತಕ್ಷಣ ಈ ದಿನ ಸಾಯಂಕಾಲವೇ ನಾನು ಇದಕ್ಕೆ ಉತ್ತರಗಳನ್ನು ತರಿಸಿ ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ಅಷ್ಟಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ವಿಷಯಗಳು ಬೇಡವೇ? ಇದ್ದಕ್ಕಿದ್ದಹಾಗೆ ಹೇಳಿಬಿಡುವುದಕ್ಕಾಗುತ್ತದೆಯೆ ?

ಶ್ರೀ ಎಸ್. ಬಂಗಾರಪ್ಪ.—ಇದಂ ಅರ್ಥವಾಗುವುದಕ್ಕೆ ಎಷ್ಟು ಕಾಲ ಹಿಡಿಯಿತೆ ? ಏನ್ರಿ ಇದು?

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಂಕ್ತಾಯ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಇಷ್ಟು ಹೇಳಿದೆ ನಮಗೂ ತೊಂದರೆ ಕೊಡಬೇಕೆ ?

ಅಧ್ಯಕ್ಷರು.—ಶ್ರೀ ಆಚಾರ್ ಅವರು ದಯವಿಟ್ಟು ತಮ್ಮ ಸೂಚನೆ ಬಗ್ಗೆ ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆ

ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ನೀಡುವಾಗ ವಿದ್ಯಾರ್ಥಿಗಳಿಗೆ ತೊಂದರೆಯಾದ ಬಗ್ಗೆ :

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೆ. ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶಾವಕಾಶ ನೀಡುವಾಗ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಗಳ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾಮಂತ್ರಿಗಳು).—ರಾಜ್ಯದಲ್ಲಿರುವ ಸರ್ಕಾರದ ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ತಾಂತ್ರಿಕ ಕಾಲೇಜುಗಳಲ್ಲಿನ ಸರ್ಕಾರದ ಸೀಟುಗಳನ್ನು ವಿದ್ಯಾರ್ಥಿಗಳ ಪ್ರತಿಭೆಯ ಆಧಾರ ಮತ್ತು ವಿವಿಧ ವರ್ಗಗಳಿಗೆ ಕಾಯ್ದಿರಿಸಿರುವ ಪ್ರಮಾಣದ ಮೇಲೆ ಮಾತ್ರ ಆಯ್ಕೆ ಮಾಡಲು ಸಾಧ್ಯವಿದೆ. ವಿದ್ಯಾರ್ಥಿಗಳ ಪ್ರತಿಭೆಯಿಂದೇ ಆಧಾರ ವಿದ್ಯಾರ್ಥಿಗಳು ತಮಗೆ ಬೇಕಾಗಿರುವ ಕೋರ್ಸುಗಳನ್ನು ಮತ್ತು ಕಾಲೇಜುಗಳನ್ನು ಆದ್ಯತೆಯ ಮೇರೆಗೆ ತಮ್ಮ ಅರ್ಜಿಯಲ್ಲಿ ತಿಳಿಸಬಹುದು. ತಾಂತ್ರಿಕ ಶಿಕ್ಷಣ ನಿರ್ದೇಶಕರು ವಿದ್ಯಾರ್ಥಿಗಳ ಬೇಡಿಕೆಗಳನ್ನು 'ಕಂಪ್ಯೂಟರ್' ನಲ್ಲಿ ವಿಶ್ಲೇಷಿಸಿ ವಿದ್ಯಾರ್ಥಿಗಳ ಪ್ರತಿಭೆಯ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡುತ್ತಾರೆ.

ಈಗ ಅನುಸರಿಸುತ್ತಿರುವ ಮಾರ್ಗ ಬಹಳ ಸೂಕ್ತವಾಗಿದೆ. ಇದರಲ್ಲಿ ಯಾವ ತರಹೆಯ ಲೋಪ ದೋಷಗಳೂ ಇಲ್ಲ. ಏಕೆಂದರೆ ಆಯ್ಕೆಯನ್ನು ಕಂಪ್ಯೂಟರೇ ಮಾಡುತ್ತದೆ. ವಿದ್ಯಾರ್ಥಿಗಳು ಕೇಳಿದ ಕೋರ್ಸುಗಳನ್ನಾಗಲೀ, ಅಥವಾ ಕಾಲೇಜುಗಳನ್ನೇ ಆಗಲಿ ಕೊಡಲು ಕೆಲವು ಕಡೆ ಸಾಧ್ಯವಾಗದೇ ಹೊಗಬಹುದು. ಏಕೆಂದರೆ ಪ್ರತಿ ಕಾಲೇಜುಗಳಲ್ಲಿ ಪ್ರತಿ ಕೋರ್ಸಿಗೆ ಇಂತಿಷ್ಟೇ ಸೀಟುಗಳೆಂದು ಸರ್ಕಾರ ನಿಗದಿಪಡಿಸಿದೆ. ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳು ಒಂದೇ ಕಾಲೇಜಿನ ಒಂದೇ ಕೋರ್ಸನ್ನು ಕೇಳಿದರೆ ಅಷ್ಟನ್ನು ಮಾತ್ರ ತುಂಬಿ ಎಂಕ್ಕವರಿಗೆ ಬೇರೆ ಕಾಲೇಜುಗಳನ್ನು ಅಂದರೆ ಅವರು ಕೇಳಿರುವ ಎರಡನೆಯ ಕಾಲೇಜಾಗಲೀ ಅಥವಾ ಕೋರ್ಸಾಗಲೀ ಕೊಡಲು ಸಾಧ್ಯ. ಈ ಕಾರಣದಿಂದ ಕೆಲವು ಕಡೆ ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿ ತಾನು ಕೇಳಿದ ಕಾಲೇಜಾಗಲೀ, ಕೋರ್ಸಾಗಲೀ ಪಡೆಯದೆ ಬೇರೆ ಕಾಲೇಜಿಗೆ ಆಯ್ಕೆ ಆಗಬಹುದು.

ಮಾನ್ಯ ಸದಸ್ಯರು ವಿದ್ಯಾರ್ಥಿಗಳಿಗೆ ಯಾವ ರೀತಿಯ ತೊಂದರೆಗಳು ಉಂಟಾಗಿವೆ ಎಂದು ಸ್ಪಷ್ಟ ಪಡಿಸಿಲ್ಲ. ಬಹುಶಃ ಬೆಂಗಳೂರಿನ ವಿದ್ಯಾರ್ಥಿಗೆ ಗುಲ್ಬರ್ಗದಲ್ಲಿ, ಬೀದರ್‌ನ ವಿದ್ಯಾರ್ಥಿಗೆ ಮೈಸೂರಿನಲ್ಲಿ ಆಗಲೀ ಸೀಟು ಸಿಕ್ಕಿದರೆ, ಅದು ಅವರಿಗೆ ಆಗಿರುವ ತೊಂದರೆ ಎಂದು ಪರಿಗಣಿಸುತ್ತಿದ್ದಾರೆಂದು ತೋರುತ್ತದೆ. ಇಡೀ ರಾಜ್ಯವನ್ನೇ ಒಂದು ಘಟಕವಾಗಿಟ್ಟುಕೊಂಡು ಪ್ರತಿಭೆ, ವಿವಿಧ ವರ್ಗಗಳಿಗೆ ಕಾಯ್ದಿರಿಸಿರುವ ಪ್ರಮಾಣ ಮತ್ತು ಆಧ್ಯತಾ ಪ್ರಕಾರವಾಗಿ ಕೇಳಿರುವ ಕೋರ್ಸು ಮತ್ತು ಕಾಲೇಜು, ಇವುಗಳ ಆಧಾರದ ಮೇಲೆ ಆಯ್ಕೆ ಮಾಡುವಾಗ ಕಡಿಮೆ ಅಂಕ ಪಡೆದಿರುವವರಿಗೆ ಅವರು ಕೇಳಿದ ಕೋರ್ಸಾಗಲಿ ಅಥವಾ ಕಾಲೇಜು ದೊರಕದಿರಬಹುದು. ಆದರೆ ಈ ಆಧಾರಗಳನ್ನು ಬಿಟ್ಟು ಬೇರೆ ರೀತಿಯ ಆಯ್ಕೆ ಬಹಳ ಕಷ್ಟ. ಹಾಗೇನಾದರೂ ಬೇರೆ ರೀತಿಯಲ್ಲಿ ಆಯ್ಕೆ ಮಾಡಿದರೆ ಇನ್ನೂ ಅನೇಕ ರೀತಿಯ ದೂರುಗಳು ಮತ್ತು ತೊಂದರೆಗಳು ಬರುವ ಸಾಧ್ಯತೆ ಇದೆ.

ಈಗ ಆಯ್ಕೆ ಮಾಡಲು ಅನುಸರಿಸುತ್ತಿರುವ ವಿಧಾನವು ಬಹಳಂತೇಕ ಸಮಂಜಸವಾಗಿದೆ ಎಂದೂ ಪಂತ್ತು ಅನುಕೂಲಕರವಾಗಿದೆ ಎಂದೂ ಸಾರ್ವಜನಿಕರ ಅಭಿಪ್ರಾಯ ಇರುವುದರಿಂದ, ಈಗಿರುವ ಆಯ್ಕೆಯ ವಿಧಾನವೇ ಸೂಕ್ತವಾಗಿದೆ.

ಶ್ರೀ ವಿ. ಎಸ್. ಆಚಾರ್ಯ.–ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅನರ್ಹರಿಗೆ ಎಷ್ಟು ಪ್ರವೇಶಾವಕಾಶ ಸಿಕ್ಕಿದೆ ಎಂಬ ಆಪಾದನೆಯನ್ನು ನಾನು ಮಾಡಿಲ್ಲ. ಪ್ರವೇಶಾವಕಾಶಕ್ಕೆ ಅರ್ಹರಾಗಿದ್ದು ರಿಸರ್ವೇಷನ್ ಪೂಲ್‌ನಲ್ಲಿ ಬರುವ ವಿದ್ಯಾರ್ಥಿಗಳಿಗೆ ಆಗಿರುವ ಸಿರಾಶೆಯ ಬಗ್ಗೆ ಸರ್ಕಾದ ಗಮನ ಸೆಳೆದಿದ್ದೇನೆ. ಇಪತ್ತು ಅವರು ಬಯಸಿದ ಕೋರ್ಸ್ ಅಥವಾ ಕಾಲೇಜು ಎರಡೂ ಸಿಕ್ಕದೇ ಇದ್ದಂಥ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕಾದಿರಿಸಿದಂಥ ವರ್ಗದಲ್ಲಿ ಒದಗಿಬಂದಂಥ ದುರ್ದೆಸೆ ಬಗ್ಗೆ ಕೇಳಿದ್ದೇನೆ. ಅವರ ಜೆಲ್ಲೆ ಮತ್ತು ಅವರ ಜೇಡಿಕೆ ಯಾವುದನ್ನು ನೋಡದೆ ಬೇರೆ ಬೇರೆ ಕಡೆ ಪ್ರವೇಶಾವಕಾಶ ನೀಡಿದ್ದಾರೆ. ಉಲ್ಲಾಳದ ಹುಡುಗನಿಗೆ ಗುಲ್ಬರ್ಗದಲ್ಲಿ ಕೊಟ್ಟಿದ್ದಾರೆ. ಈ ಹುಡುಗ ಇಲ್ಲಿಂದ ಅಲ್ಲಿ ಹೋಗಬೇಕೆಂದರೆ ಕನ್ಯಾಕುಮಾರಿಗೆ ಹೋದಂತಾಗುತ್ತದೆ. ನಮ್ಮ ಜಿಲ್ಲೆಯಲ್ಲೇ ಅನೇಕ ಖಾಸಗಿ ಕಾಲೇಜುಗಳು ಏಡೆಡ್ ಕಾಲೇಜುಗಳು ಹಾಗೂ ಸರ್ಕಾರಿ ಕಾಲೇಜುಗಳಿವೆ. ಕಂಪ್ಯೂಟರ್‌ಗೆ ಫೀಡ್ ಮಾಡಿದ್ದೇವೆ ಎಂದು ಅವರು ಹೇಳುತ್ತಾರೆ. ಕಂಪ್ಯೂಟರ್ ಏನಿದ್ದರೂ ಅಂಕ ಸಂಖ್ಯೆಗಳನ್ನು ಕೊಡುತ್ತದೆಯೇ ಹೊರತು ಅದಕ್ಕೆ ಹೃದಯ ಇಲ್ಲ. ಮನೆ ಹತ್ತಿರ ಕಾಲೇಜಿದ್ದು ಪ್ರತಿಭಾವಂತರಾಗಿರುವವರಿಗೆ ಅಲ್ಲಿ ಪ್ರವೇಶಾವಕಾಶ ನೀಡಿಲ್ಲ. ಪುನರ್‌ಪರಿಶೀಲನೆ ಮಾಡಿದ ಪಟ್ಟಿ ಪ್ರಕಟವಾಗಿದ್ದು ಅದರಲ್ಲೂ ಕೂಡ ಈ ಹೆಸರುಗಳಿಲ್ಲ. ಅವರು ಕೇಳಿದಂಥ ಜಾಗದಲ್ಲಿ ಅವರು ಕೇಳಿದಂಥ ಕೋರ್ಸಿಗೆ ಪ್ರವೇಶಾವಕಾಶ ನೀಡಲು ಏನೂ ತೊಂದರೆಯಿಲ್ಲ. ಅದರೂ ಕೊಡದಿರುವುದಕ್ಕೆ ಕಾರಣ ವೇನು? ೯೫.೭ ಪರ್ಸೆಂಟ್ ಅಂಕ ಪಡೆದ ಹುಡುಗ ದಡ್ಡನೆ? ಪ್ರವೀಣ ಚಂದ್ರ ಎಂಬ ಹುಡುಗ ೯೫.೭ ಪರ್ಸೆಂಟ್ ಅಂಕ ಪಡೆದಿದ್ದಾನೆ. ಅವನು ಕೇಳಿದ್ದು ಸಿವಿಲ್ ಗ್ರೂಪ್ ಮತ್ತು ಹತ್ತಿರದ ಸುರತ್ಕಲ್ಲಿನ ಕಾಲೇಜು. ಅಲ್ಲಿ ಅವನಿಗೆ ಪ್ರವೇಶ ಸಿಗಲಿಲ್ಲ. ಇನ್ನೊಬ್ಬರಿಗೆ ೯೪ ಪರ್ಸೆಂಟ್ ಬಂದಿದೆ. ವಂತೊಬ್ಬರು ೮೭.೫ ಪರ್ಸೆಂಟ್ ಪಡೆದಿದಾರೆ. ಮಹದೇವ್ ಎಂಬ ವಿದ್ಯಾರ್ಥಿಗೆ ೯೭ ಪರ್ಸೆಂಟ್ ಬಂದಿದ್ದು ಅವರು ಕೇಳಿದ ಕಾಲೇಜು ಕೊಡದಿದ್ದುದರಿಂದ ನಿರಾಕರಿಸಿ ಇಂಜಿನೀಯರಿಂಗ್ ಕೋರ್ಸೇ ಬೇಡ ಎಂದು ಬೇರೆ ಕೋರ್ಸಿಗೆ ಹೋಗುವ ವಿಚಾರ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಪುನರ್ ಪರಿಶೀಲನೆ ಮಾಡುವ ಭರವಸೆ ಕೊಡಬೇಕು. ಒಂದು, ಎರಡು, ಮೂರು ವಿದ್ಯಾರ್ಥಿಗಳು ಬಂದು ಹೇಳಿದ್ದಕ್ಕಾಗಿ ಈ ವಿಚಾರವನ್ನು ನಾನು ಎತ್ತಲಿಲ್ಲ. ಅನೇಕ ಜನರು ಬಂದು ಹೇಳಿದ ಮೇಲೆ ನಾನಂ ಗವರ್ನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ವಿದ್ಯಾರ್ಥಿಗಳಿಗೆ ಈ ದುರ್ದಸೆಯುಂಟಾಗಿ ಹತಾಶ ಭಾವನೆ ಬರುವುದಕ್ಕೆ ಸರ್ಕಾರೆ ಅವಕಾಶ ಕೊಡಬಾದು. ಅದಷ್ಟು ಮಟ್ಟಿಗೆ ಅವರವರ ಡಿವಿಜನ್‌ನಲ್ಲೇ ಶಿಕ್ಷಣವನ್ನು ಮುಂದುವರೆಸಂವುದಕ್ಕೆ ಅವಕಾಶ ಮಾಡಿಕೊಡಬೇಕು. ರೆವಿನ್ಯೂ ಡಿವಿಜನ್‌ನಲ್ಲಿ ಏನು ನಾಲ್ಕು ಭಾಗ ಇದೆ. ಆ ತರಹವಾದರೂ ಮಾಡಿ ಆಯಾಯ ಡಿವಿಜನ್‌ನಲ್ಲಿ ಅವಕಾಶ ಮಾಡಿಕೊಡಬೇಕು. ಎಲ್ಲಾ ಕಡೆ ಸರ್ಕಾರಿ ಕಾಲೇಜು ಮತ್ತು ಏಡೆಡ್ ಕಾಲೇಜುಗಳಿವೆ. ಆದ್ದರಿಂದ ಈ ವಿಷಯವನ್ನು ಪರಿಗಣನೆ ಮಾಡಿ ತಾಂತ್ರಿಕ ಶಿಕ್ಷಣದ ನಿರ್ದೇಶಕರು ಮತ್ತು ಇತರ ಸಂಬಂದಪಟ್ಟ ಅಧಿಕಾರಿಗಳು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಪುನರ್‌ಪರಿಶೀಲನೆ ಮಾಡುವುದಕ್ಕೆ ಅವಕಾಶ ಉಂಟೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ರಾಚಯ್ಯ:–ಕಂಪ್ಯೂಟರ್ ತಪ್ಪು ಏನೂ ಇಲ್ಲ. ಪ್ರವೀಣ್ ಚಂದ್ರ ಎಂಬ ವಿದ್ಯಾರ್ಥಿ ಮೊದಲನೇ ಚಾಯ್ಸ್‌ನಲ್ಲಿ ಏನು ಕೇಳಿದ್ದಾನೋ ಅದಕ್ಕೆ ಕೊಟ್ಟಿದ್ದೇವೆ.

ಶ್ರೀ ವಿ.ಎಸ್.ಆಚಾರ್ಯ:–ಆಮೇಲೆ ಅವರು ಮನವಿ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ :–ಅರ್ಜಿ ಹಾಕುವಾಗ ಮೊದಲನೇ ಪ್ರಿಫರನ್ಸ್ ಇಂಥ ಕಡೆ ಇರಬೇಕು ಎಂದು ಕೇಳಿರುವ ಪ್ರಕಾರ ಕೊಟ್ಟಿದ್ದೇವೆಯೇ ವಿನಹ ಅದನ್ನು ಬದಲಾವಣೆ ಮಾಡಿ ಕೊಡುವುದಕ್ಕೆ ಆಗಿಲ್ಲ. ೯೯.೫೩ ಪರ್ಸೆಂಟ್ ಪಡೆದ ೧೧ ವಿದ್ಯಾರ್ಥಿಗಳಿದ್ದಾರೆ. ನಮ್ಮ ಮಕ್ಕಳಿಗೆ ೯೫ ಪರ್ಸೆಂಟ್ ಬಂದಿದ್ದರೆ ಸಂತೋಷದ ವಿಷಯ. ಆದರೆ ಆ ೧೧ ಜನರಿಗೂ ಕಂಪ್ಯೂಟರೈಸ್ ಮಾಡಿ ಕೊಡುವುದಕ್ಕೆ

ಸಾಧ್ಯವಾಗಿಲ್ಲ. ಯಾರು ಯಾರು ಕಂಪ್ಯೂಟರ್ ರೈಸ್ ಮಾಡುವಾಗ ಇಂಥದ್ದೇ ಬೇಕು ಎಂದು ಮೊದಲನೇ ಚಾಯ್ಸ್ ಕೇಳಿದ್ದಾರೋ ಆದರೆ ಪ್ರಕಾರ ಕೊಟ್ಟಿದ್ದೇವೆ. ಆದನ್ನು ಆದಲು ಬದಲು ಮಾಡಿದರೆ ಗೊಂದಲಕ್ಕೆ ಈಡಾಗಬೇಕಾಗುತ್ತದೆಂದು ಸುಮ್ಮನಿದ್ದೇವೆ.

ಶ್ರೀ ವಿ. ಎಸ್. ಆಚಾರ್ಯ.—ಕಂಪ್ಯೂಟರ್ ವ್ಯವಸ್ಥೆಯಿಂದ.....

ಶ್ರೀ ಬಿ. ರಾಚಯ್ಯ:—ವಿವರಗಳಿವೆ. ಬೇಕಾದರೆ, ವೆರಿಫೈ ಮಾಡಿಕೊಳ್ಳಬಹುದು.

ಶ್ರೀ ವಿ. ಎಸ್. ಆಚಾರ್ಯ.—ಕಂಪ್ಯೂಟರ್ ವ್ಯವಸ್ಥೆಯಲ್ಲಿ ಅವರು ಕೇಳಿದ ಕೋರ್ಸನ್ನೇ ಬಹಳ ದೂರದ ಕಾಲೇಜಿನಲ್ಲಿ ಕೊಟ್ಟಿದ್ದಾರೆ. ಅವರು ಕೇಳಿದ ಕಡೆಗಿಂತಾ ಬಹಳ ದೂರದಲ್ಲಿ ಅವರಿಗೆ ಅವಕಾಶ ಕೊಟ್ಟಿದ್ದಾರೆ. ಕಂಪ್ಯೂಟರ್ ಫೀಡಿಂಗ್‌ನಲ್ಲಿ ಯಾರೂ ಕೈಹಾಕಿಲ್ಲವೆಂದೂ ಉದ್ದೇಶಪೂರ್ವಕವಾಗಿ ಇದನ್ನು ಮಾಡಿದ್ದಾರೆಂದು ನಾನು ಹೇಳಿಲಿಲ್ಲ. ದಯವಿಟ್ಟು ಪುನರ್‌ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಅವರು ಕೇಳಿದ ಹತ್ತಿರದ ಕಾಲೇಜುಗಳಲ್ಲೇ ಅವರಿಗೆ ಅವಕಾಶವನ್ನು ಮಾಡಿ ಕೊಡಿ.

ಅಧ್ಯಕ್ಷರು.—ಇದು ಗಮನ ಸೆಳೆಯುವ ಸೂಚನೆ. ಇದರಲ್ಲಿ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಮಾನವೀಯತೆಯ ದೃಷ್ಟಿಯಿಂದ ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲವೇ. ಶೇಕಡಾ ಐವತ್ತು ಜನ ಆದಲು ಬದಲು ಮಾಡಲು, ಗುಲ್ಬರ್ಗಾದವರು ಹಾಸನಕ್ಕೆ ಬರುವುದಿದ್ದರೆ...

ಅಧ್ಯಕ್ಷರು.—ಮಾನವೀಯತೆ ದೃಷ್ಟಿಯಿಂದ ಇದನ್ನು ಮಾಡಲು ಸಾಧ್ಯವೇ ಎಂದು ತಾವು ಕೇಳುತ್ತಿದ್ದೀರಿ.

ಶ್ರೀ ಬಿ. ರಾಚಯ್ಯ.—ಯಾರಿಗೂ ತೊಂದರೆಯಾಗದಿದ್ದರೆ ಪುನರ್ ಪರಿಶೀಲನೆ ಮಾಡಬಹುದು. ಆದರೆ ಒಬ್ಬರಿಗೆ ಅನುಕೂಲ ಮಾಡುವುದಕ್ಕೆ ಹೋದರೆ ಇನ್ನೊಬ್ಬರಿಗೆ ಅನಾನುಕೂಲವಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇವೆ ಸ್ವಾಮಿ.

ಕಾವೇರಿ ಎರಡನೆ ಹಂತದ ಯೋಜನೆ ಪೂರ್ಣಗೊಳಿಸುವ ಬಗ್ಗೆ

ಶ್ರೀ ಪಿ. ರಾವಂದೇವ್.—೧೯೮೩ನೇ ಜುಲೈ ಅಂತ್ಯದವರೆಗೂ ಕಾವೇರಿ ಎರಡನೆಯ ಹಂತದ ಯೋಜನೆಯನ್ನು ಪೂರ್ಣಗೊಳಿಸದಿರುವುದರಿಂದ ಬೆಂಗಳೂರಿನ ಜನತೆಗೆ ಕುಡಿಯುವ ನೀರಿನ ಅಭಾವದ ವಿಚಾರವನ್ನು ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—ಕಾವೇರಿ ಎರಡನೇ ಹಂತದ ಯೋಜನೆಯಿಂದ ಸಧ್ಯಕ್ಕೆ ೧೦ ಮಿಲಿಯನ್ ಗ್ಯಾಲನ್ ನೀರು ಸರಬರಾಜಾಗುತ್ತಿದ್ದು, ೩೦ ಮಿಲಿಯನ್ ಗ್ಯಾಲನ್‌ಗೆ ಆಗಸ್ಟ್ ೧೯೮೩ ರಿಂದ ಹೆಚ್ಚಿಸುವ ಯೋಜನೆ ಪಾಕಲಾಗಿತ್ತು. ಆದರೆ ಈ ದಿಶೆಯಲ್ಲಿ ಏರ್ ಚೇಂಬರ್‌ಗಳನ್ನು ಜೋಡಿಸುವ ಕೆಲಸಗಳು ಪೂರ್ಣಗೊಳ್ಳದಿದ್ದರಿಂದ, ಕಾವೇರಿ ಎರಡನೆ ಹಂತದ ಉಳಿದ ೨೦ ಮಿಲಿಯನ್ ಗ್ಯಾಲನ್ ನೀರನ್ನು ಆಗಸ್ಟ್‌ ತಿಂಗಳಿಂದ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ.

೧೭೫೦ ಮಿ.ಮೀ. ವ್ಯಾಸದ ಕೊಳವೆ ಹಾಕುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲಾಗಿದೆ. ಏರ್ ಚೇಂಬರ್‌ಗಳಿಗೆ ಬೇಕಾದ ಸ್ಟೀಲ್ ಪ್ಲೇಟ್‌ಗಳನ್ನು ಆವಂದಾ ಪಾಡಿಕೊಳ್ಳಬೇಕಾಗಿದ್ದು ಇದರಿಂದ ಕೆಲವು ತಿಂಗಳುಗಳು ತಡವಾಯಿತು. ಈಗ ಕಾರ್ಖಾನೆಯಲ್ಲಿ ಕೆಲಸಗಳು ಭರದಿಂದ ಸಾಗಿದ್ದು ಳ ಏರ್ ಚೇಂಬರ್‌ಗಳು ಅಕ್ಟೋಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದ್ದು, ಆ ಹೊತ್ತಿಗೆ ೧೦ ಮಿಲಿಯನ್ ಗ್ಯಾಲನ್ ಅಧಿಕ ನೀರನ್ನು ಸರಬರಾಜು ಮಾಡಲಾಗುವುದು. ಇನ್ನು ಉಳಿದ ೩ ಏರ್ ಚೇಂಬರ್‌ಗಳ ಕಾರ್ಯಗಳು ಮಾರ್ಚ್ ೧೯೮೪ರ ಕೊನೆಯ ಹೊತ್ತಿಗೆ ಸಂಪೂರ್ಣಗೊಂಡು, ಏಪ್ರಿಲ್ ೧೯೮೪ರ ಹೊತ್ತಿಗೆ ಪೂರ್ತಿ ೩೦ ಮಿಲಿಯನ್ ಗ್ಯಾಲನ್ ನೀರನ್ನು ಕಾವೇರಿ ಎರಡನೆ ಹಂತದ ಯೋಜನೆಯಿಂದ ಬೆಂಗಳೂರು ನಗರಕ್ಕೆ ಸರಬರಾಜು ಮಾಡಲಾಗುವುದು.

ಶ್ರೀ ಪಿ. ರಾಮೆ ದೇವ್.—ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಕೊಟ್ಟಿರತಕ್ಕ ವಿವರ ಸಂಪೂರ್ಣ ವಾಗಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಕಾವೇರಿ ೨ನೇ ಹಂತದ ಯೋಜನೆ ೧೯೮೧ರಲ್ಲಿ ಪ್ರಾರಂಭ